"ಅವ್ನು ಒಗಟು ಬಿಡಿಸುವುದು, ಪದಬಂಧ, ವಿನೋದದ ಲೆಕ್ಕ, ಪ್ರಶ್ನೆಗಳಿಗೆ ಉತ್ತರ ಹುಡುಕುವುದರಲ್ಲಿ ನಿಪುಣ. ನಾನು ಮತ್ತು ಅವ್ನು ಹೆಚ್ಚಾಗಿ ಅಂತಹ ಆಟಗಳನ್ನು ಆಡ್ತಾ ಇದ್ದೆವು. ಆತನಿಗೆ ನಾನು ಪಾರ್ಕಿನ ಎದುರಿಗಿರುವ ಬ್ಯಾಂಕಿಗೆ ಹೋಗುವ ವಿಷಯ ಗೊತ್ತು. ಆದರೆ ನಾನು ಅಲ್ಲಿ ಖಾತೆ ತೆರೆದದ್ದು ನನ್ನ ಮಕ್ಕಳಿಗೆ ಗೊತ್ತಾಗದಂತೆ ನೋಡಿಕೊಂಡಿದ್ದೆ. ಅವ್ನಿಗೆ ಆ ಚಿತ್ರಗಳ ರಹಸ್ಯ ಬಿಡಿಸುವುದು ಕಷ್ಟವಾಗಲಾರದು."

"ನಿಮ್ಮ ತಂಗಿಯ ಮಗಳ ಹತ್ತಿರವೇ ಉಯಿಲು ಕೊಡಬಹುದಿತ್ತಲ್ಲ."

"ಅದಕ್ಕೆ ಎರಡು ತೊಂದರೆ. ಒಂದು, ಆಕೆ ಆಸ್ತಿಯಲ್ಲಿ ಪಾಲು ಬೇಡ ಅನ್ನುತ್ತಿದ್ದಳು. ಅವಳು ಅದನ್ನು ತೋರಿಸಿ, ಆಸ್ತಿಯಲ್ಲಿ ಪಾಲು ಕೇಳದಿರುವ ಸಾಧ್ಯತೆಯೇ ಜಾಸ್ತಿ. ಇನ್ನೊಂದು, ಅದನ್ನು ಆಕೆ ತೋರಿಸಿದರೂ, ನನ್ನ ಮಕ್ಕಳು ಅದು ನಕಲಿ ಅಂತ ಹೇಳಿ ಜಗಳವಾಡಬಹುದು."

"ನೀವು ಅದನ್ನು ರಿಜಿಸ್ಟರ್ ಮಾಡಿಸಿ ಬಿಡಬಹುದಿತ್ತಲ್ಲ."

"ನನ್ನ ಮಕ್ಕಳು ಒತ್ತಡ, ಬೆದರಿಕೆ ಹಾಕಿ ಇನ್ನೊಂದು ಉಯಿಲು ಮಾಡಿಸದೇ ಬಿಡುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಇನ್ನೊಂದು ಉಯಿಲಿನ ಬಗ್ಗೆ ಗೊತ್ತಾಗದೇ ಇರುವುದೇ ಕ್ಷೇಮಕರ. ಮಕ್ಕಳಿಗೆ ಅನುಮಾನ ಬಂದಿದೆಯೇ ಅಂತ ಗೊತ್ತಿಲ್ಲ."

"ನೀವೇನೂ ಚಿಂತೆ ಮಾಡಬೇಡಿ. ನಿಮ್ಮ ಮಕ್ಕಳು ನಿಮಗೆ ಬೆದರಿಕೆ ಹಾಕಿದರೆ, ತಕ್ಷಣ ನಮಗೆ ತಿಳಿಸಿ. ನಿಮಗೆ ಯಾವುದೇ ತೊಂದರೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ."

"ತ್ರಿತೀರ ಮಾಚಯ್ಯ ಯಾರು?"

"ನನ್ನ ಮಿತ್ರ. ನಾಲ್ಕು ವರ್ಷದ ಹಿಂದೆ ಹುಟ್ಟಿದ ಹಬ್ಬಕ್ಕೆ ವಾಕಿಂಗ್ ಸ್ಟಿಕ್ ಉಡುಗೊರೆಯಾಗಿ ಕೊಟ್ಟ."

ಅಲ್ಲಿಂದ ಹಿಂದಿರುಗುತ್ತಿರುವಾಗ, ನಾನು ಕರಮಚಂದನಲ್ಲಿ ಹೇಳಿದೆ,

"ಸುಬ್ಬಯ್ಯನು ಯಾಕೆ ತನ್ನ ಮೇಲೆ ಹಲ್ಲೆ ಮಾಡಿದ್ದು ಪೂವಯ್ಯನ ಮಕ್ಕಳು ಅಂತ ಹೇಳಲಿಲ್ಲ?"

"ಅದೇನೂ ದೊಡ್ಡ ರಹಸ್ಯವಲ್ಲ. ಮಕ್ಕಳ ಹೆಸರು ಹೇಳಿ, ದೂರು ಕೊಟ್ಟರೆ, ಪೂವಯ್ಯನಿಗೆ ಬೇಸರವಾಗುತ್ತದೆಂದು ಸುಬ್ಬಯ್ಯ ಸುಮ್ಮನಿದ್ದ. ಅವ್ನಿಗೆ ಆ ಚಿತ್ರಗಳನ್ನು ನೋಡಿದಾಗಲೇ, ಆ ಜಾಗ ಯಾವುದೆಂದು ಗೊತ್ತಾಗಿತ್ತಂತೆ. ಆದರೆ ಪೂವಯ್ಯ ಆ ವಿಚಾರ ರಹಸ್ಯವಾಗಿರಬೇಕು ಅಂತ ಹೇಳಿದ್ದರಿಂದ ಮಕ್ಕಳಲ್ಲಿ ಹೇಳಲಿಲ್ಲವಂತೆ. ಮಕ್ಕಳು ಆತನ ಮೇಲೆ ಒತ್ತಡ ಹಾಕ್ದಾಗ, ತಾಳ್ಮೆ ತಪ್ಪಿ, ತಾನೇ ಮೊದಲು ಹೊಡೆದಿದ್ದು ಅಂತ ಆತ ಒಪ್ಪಿಕೊಂಡ."

ಆದರೂ ಉಯಿಲಿನ ರಹಸ್ಯ ಕಾಪಾಡಲು, ಪೂವಯ್ಯ ಇಷ್ಟೆಲ್ಲಾ ಕಷ್ಟಪಡಬೇಕಿತ್ತೇ ಎಂಬ ಪ್ರಶ್ನೆ ನನ್ನನ್ನು ಬಹಳ ಕಾಲ ಕಾಡುತ್ತಿತ್ತು.


### ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ತೆದಾರಿ ಕಿರುಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಕತೆ–ನೀಳ್ಗತೆಗಳೂ ಪ್ರಕಟಗೊಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.